**MARCH 2,2025**
**ALL INDIA RADIO- DHARWAD**
**PRADESH SAMACHARA (KANNADA) 12PM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವವರು: ವಿವೇಕಾದಿತ್ಯ ಕನಿಯಾಲ**

<><><>

**'ವಿಕಸಿತ ಭಾರತಕ್ಕಾಗಿ ತೋಟಗಾರಿಕೆ'**, ಶೀರ್ಷಿಕೆಯಡಿ, ರಾಷ್ಟ್ರೀಯ ತೋಟಗಾರಿಕೆ ಮೇಳ, ಯಶಸ್ವಿಯಾಗಿ ಸಂಪನ್ನಗೊಂಡಿತು ಎಂದು, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ. ಬೆಂಗಳೂರಿನ ಹೆಸರಘಟ್ಟದ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ, 60 ವರ್ಷ ಪೂರೈಸುತ್ತಿದೆ. ಐವತ್ತಕ್ಕೂ ಹೆಚ್ಚು, ತೋಟಗಾರಿಕೆ ಬೆಳೆಗಳಲ್ಲಿ, 300ಕ್ಕೂ ಅಧಿಕ ತಳಿಗಳು, 150 ಕ್ಕೂ ಹೆಚ್ಚಿನ ತಂತ್ರಜ್ಞಾನಗಳನ್ನು, ಅಭಿವೃದ್ಧಿ ಪಡಿಸಿದೆ ಎಂದರು. ಸಣ್ಣ ಮತ್ತು ಅತೀ ಸಣ್ಣ ರೈತರ ಆದಾಯ ದ್ವಿಗುಣ ಗೊಳಿಸಲು, ಸಂಸ್ಥೆ ಯೋಜನೆ ರೂಪಿಸಿ, ನಿರಂತರ ಸಂಶೋಧನೆಯಲ್ಲಿ ತೊಡಗಿದೆ. ಡೀಮ್ಡ್ ವಿಶ್ವವಿದ್ಯಾಲಯವಾಗುವ ಅರ್ಹತೆ ಹೊಂದಿದೆ, ಎಂದು ಅವರು ನುಡಿದರು.

<><><>

**ಹಂಪಿಯು ನಮಸ್ತ** ಕನ್ನಡಿಗರ ಹೆಮ್ಮೆಯ ಸ್ಥಳವಾಗಿದೆ. ಇದರ ವಾರಸುದಾರರು ಕನ್ನಡಿಗರು ಎಂಬ ದೃಷ್ಟಿಯಿಂದ ಹಂಪಿ ಉತ್ಸವವನ್ನು ಅಚ್ಚುಕಟ್ಟಾಗಿ ಆಯೋಜಿಸಲಾಗಿದೆ ಎಂದು ರಾಜ್ಯ ಪ್ರವಾಸೋದ್ಯಮ ಖಾತೆ ಸಚಿವ ಎಚ್.ಕೆ ಪಾಟೀಲ್ ಹೇಳಿದರು. ಹಂಪಿ ಉತ್ಸವ–2025 ರ ಎರಡನೇ ದಿನದಂದು ಆಯೋಜಿಸಲಾದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

<><><>

**ಧ್ವನಿ: ಎಚ್.ಕೆ ಪಾಟೀಲ್ 37 ಸೆಕೆಂದುಗಳು**

<><><>

**ಹಂಪಿ ಉತ್ಸವದ** ಅಂಗವಾಗಿ ಕುಸ್ತಿ ಅಖಾಡದಲ್ಲಿ, ಹಂಪಿ ಕಿಶೋರ, ಹಂಪಿ ಕುಮಾರ, ಹಂಪಿ ಕೇಸರಿ ಹಾಗೂ ಹಂಪಿ ಕಂಠೀರವ ವಿಭಾಗಗಳಲ್ಲಿ ನಡೆದ ರಾಜ್ಯ ಮಟ್ಟದ ಪಾಯಿಂಟ್ ಕುಸ್ತಿಯಲ್ಲಿ 31 ಪುರುಷರು, 25 ಮಹಿಳೆಯರು, ಜಿಲ್ಲಾ ಮಟ್ಟದ ಚಿತ್ ಕುಸ್ತಿ ವಿಭಾಗದಲ್ಲಿ 31 ಜನ ಸ್ಪರ್ಧಿಗಳು ಭಾಗವಹಿಸಿದ್ದರು.

<><><>

**ಸಿನಿಮಾ ಮಾಧ್ಯಮ** ಸಮಾಜವನ್ನು ಬೆಸೆಯುವ, ಸೌಹಾರ್ದ ಹಾಗೂ ಮಾನವೀಯ ಮೌಲ್ಯಗಳನ್ನು ಬಿತ್ತುವುದರ ಜೊತೆಯಲ್ಲಿ, ವರ್ತಮಾನದ ತಳಮಳಗಳಿಗೆ ಉತ್ತರ ಹುಡುಕುವ ಮಾಧ್ಯಮವಾಗಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು

ಹೇಳಿದರು. ವಿಧಾನಸೌಧದ ಮೆಟ್ಟಿಲುಗಳಲ್ಲಿ ಆಯೋಜಿಸಲಾದ 16 ನೇ ಅವೃತ್ತಿಯ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವವನ್ನು ಉದ್ಘಾಟಿಸಿ ಅವರು ಮಾತನಾಡಿದರು. ವಿಶ್ವದರ್ಜೆಯ, ಉನ್ನತ ಗುಣಮಟ್ಟದ ಫಿಲಂ ಸಿಟಿ, ಮೈಸೂರಿನಲ್ಲಿ ನಿರ್ಮಾಣವಾಗಲಿದ್ದು, 150 ಎಕರೆ ಜಾಗೆಯನ್ನು ಗುರುತಿಸಲಾಗಿದೆ ಎಂದರು.

<><><>

**ರಾಜ್ಯದ ಒಂಬತ್ತು ವಿಶ್ವವಿದ್ಯಾಲಯಗಳನ್ನು ಉಳಿಸಲು,** ಮಂಡ್ಯದಿಂದ ತಾವು ಹಕ್ಕೊತ್ತಾಯ ಹೋರಾಟ ಆರಂಭಿಸುತ್ತಿರುವುದಾಗಿ, ವಿಧಾನಸಭೆ ವಿಪಕ್ಷ ನಾಯಕ ಆರ್. ಅಶೋಕ ತಿಳಿಸಿದ್ದಾರೆ. ಮಂಡ್ಯದ ಸರ್ ಎಂ. ವಿಶ್ವೇಶ್ವರಾಯ ಪ್ರತಿಮೆ ಎದುರು, ಬಿ.ಜೆ.ಪಿ ಹಾಗೂ ಜೆ.ಡಿ.ಎಸ್. ಮುಖಂಡರೊಂದಿಗೆ, ಅವರು ಪ್ರತಿಭಟನೆ ನಡೆಸಿದರು.

<><><>

**ಶೇಕಡ 80 ರ ್ಟ ಶಿಕ್ಷಕರ ನೇಮಕಾತಿಗೆ,** ಸಚಿವ ಸಂಪುಟ ಅನುಮತಿಸಿದ್ದು, ಶಿಕ್ಷಣ ಇಲಾಖೆ, ಶೀಘ್ರ ನೇಮಕಾತಿ ಪ್ರಕ್ರಿಯೆ ಆರಂಭಿಸಲಿದೆ ಎಂದು, ಶಾಲಾ ಶಿಕ್ಷಣ ಖಾತೆ ಸಚಿವ ಮಧು ಬಂಗಾರಪ್ಪ ತಿಳಿಸಿದ್ದಾರೆ. ಮಂಡ್ಯ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆದ, ರಾಜ್ಯ ಮಟ್ಟದ ಶೈಕ್ಷಣಿಕ ಅಧಿವೇಶನ ಉದ್ಘಾಟಿಸಿ, ಅವರು ಮಾತನಾಡಿದರು. ರಾಜ್ಯದಲ್ಲಿ 15 ಸಾವಿರ ಶಿಕ್ಷಕರ ನೇಮಕಾತಿಗೆ, ಮುಖ್ಯಮಂತ್ರಿಯವರಿಗೆ ಮನವಿ ಮಾಡಿದ್ದು, ಪೂರಕವಾಗಿ ಸ್ಪಂದಿಸಿದ್ದಾರೆ. ಶಿಕ್ಷಕರ ಸಮಸ್ಯೆ ಬಗೆಹರಿಸಲು ಇಲಾಖೆ ಬದ್ಧವಾಗಿದೆ ಎಂದರು.

<><><>

**ಜಗತ್ತಿನಾದ್ಯಂತ ಪ್ರತಿ ಒಂದು ಗಂಟೆ ಅವಧಿಯಲ್ಲಿ,** 450 ಕೋಟಿ ಸೈಬರ್ ಅಪರಾಧಗಳು ನಡೆಯುತ್ತಿವೆ. ವಿಜ್ಞಾನದ ಸದ್ಬಳಕೆಗಿಂತ, ದುರ್ಬಳಕೆ ಹೆಚ್ಚಾಗಿದ್ದು, ಮೊಬೈಲ್ ಅಂತರ್ಜಾಲ ಬಳಕೆಯನ್ನು ಸುರಕ್ಷಿತವಾಗಿ, ಜವಾಬ್ದಾರಿಯಿಂದ ಮಾಡಬೇಕು ಎಂದು ಡೈನಾಮಿಕ್ಸ್ ಎಂಜಿಐ, ಸೈಬರ್ ಸೆಕ್ಯುರಿಟಿ ನಿರ್ದೇಶಕ ಡಾಕ್ಟರ್ ಉದಯಶಂಕರ ಪುರಾಣಿಕ ಹೇಳಿದರು. ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ, ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಅಂಗವಾಗಿ, ಪ್ರೊಫೆಸರ್ ಎಂ.ಐ ಸವದತ್ತಿ ದತ್ತಿ ಉಪನ್ಯಾಸ 'ಸೈಬರ್ ಸುರಕ್ಷತೆ: ವರ್ತಮಾನ ಮತ್ತು ಭವಿಷ್ಯ' ವಿಷಯ ಕುರಿತ ಅವರು ಮಾತನಾಡಿದರು.

<><><>

**ಮೈಸೂರು ಜಿಲ್ಲೆಯಾದ್ಯಂತ,** ಬೇಸಿಗೆ ಹಿನ್ನೆಲೆ, ಕುಡಿಯುವ ನೀರು ಮತ್ತು ಮೇವಿನ ಲಭ್ಯತೆ ಖಾತ್ರಿ ಪಡಿಸುವಂತೆ, ಜಿಲ್ಲಾ ಉಸ್ತುವಾರಿ ಸಚಿವ, ಎಚ್.ಸಿ. ಮಹದೇವಪ್ಪ, ಜಿಲ್ಲಾಡಳಿತಕ್ಕೆ ಸೂಚಿಸಿದ್ದಾರೆ. ಜಿಲ್ಲಾ ಪಂಚಾಯ್ತಿಯ, ಡಿ.ದೇವರಾಜ ಅರಸು ಸಭಾಂಗಣದಲ್ಲಿ, ಬೇಸಿಗೆ ನಿರ್ವಹಣೆ ಸಭೆಯ, ಅಧ್ಯಕ್ಷತೆ ವಹಿಸಿ ಅವರು, ಮಾತನಾಡಿದರು.

<><><>

**ನೈಋತ್ಯ ರೈಲ್ವೆ ವಲಯದ,** ನೂತನ ಪ್ರಧಾನ ವ್ಯವಸ್ಥಾಪಕರಾಗಿ, ಮುಕುಲ್ ಸರನ್ ಮಾಥೂರ್ ಹುಬ್ಬಳ್ಳಿಯಲ್ಲಿ, ಅಧಿಕಾರ ಸ್ವೀಕರಿಸಿದರು.

<><><>

**ಚಾಮರಾಜನಗರ ಜಿಲ್ಲೆ,** ಕೊಳ್ಳೇಗಾಲ ತಾಲೂಕು, ಚಿಕ್ಕಿಂದುವಾಡಿ ಬಳಿ ಸಂಭವಿಸಿದ ಅಪಘಾತದಲ್ಲಿ, ಮಂಡ್ಯ ಮೂಲದ ಐವರು ವಿದ್ಯಾರ್ಥಿಗಳು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮಲೈ ಮಹದೇಶ್ವರ ರಥೋತ್ಸವದಲ್ಲಿ ಪಾಲ್ಗೊಂಡು, ಮರಳುತ್ತಿದ್ದ ವೇಳೆ, ಈ ದುರ್ಘಟನೆ ಸಂಭವಿಸಿದೆ.

<><><>

**ಬಾಗಲಕೋಟೆ ಜಿಲ್ಲೆ,** ಸಕಾಲ ಸೇವೆಯ ಶ್ರೇಯಾಂಕ ಪಟ್ಟಿಯಲ್ಲಿ, ರಾಜ್ಯಕ್ಕೆ ಪ್ರಥಮ ಸ್ಥಾನ ಗಳಿಸಿದೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ 1 ಗಂಟೆ 10 ನಿಮಿಷಕ್ಕೆ..**